the rest of the amount will be disbursed to these bodies in the coming year? This is their due share and if they are given these monies it will go a long wayin improving local bodies.

SRI M. RAJASHEKARA MURTHY.—This question relates to only Sales Tax, Entry Tax and Turnover Tax.

MR. SPEAKER.—Hon member just wanted the collection made. The hon'ble Minister has furnished the required information for you. If you want any more information on the basis of your question you table a separate question. Any where have you mentioned about the municipalities, corporations octroi or whatever it is?

SRI BLASIUS M. D'SOUZA.—If I had put the question on Octroi, the Hon'ble Finance Minister would have said that the question would relate only to the Minister for Urban Development and not to him.

MR. SPEAKER —I have a solution. The demands on the Ministries Finance and Municipal Administration are coming up. Then you can raise this question.

ವಿದ್ಯುಚ್ಛಕ್ತಿ ದರ ಏರಿಕೆ

೩೨೧. ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ).—ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿದ್ಯುಚ್ಛಕ್ತಿಯ ದರವನ್ನು ಏರಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ;

ಆ) ಏರಿಕೆ ಅನಿವಾರ್ಯವೆಂದು ಹೇಳಿರುವುದು ಸರ್ಕಾರದ ಗಮನದಲ್ಲಿದೆಯೇ ;

ಇ) ಯಾವ ಏರಿಕೆಯಾದರೂ ವೈಜ್ಞಾನಿಕವಾಗಿ ಇರಬೇಕಾದ್ದಲ್ಲವೇ ;

ಈ) ಈ ಏರಿಕೆಯು ಜನ ಸಾಮಾನ್ಯನ ಮೇಲೆ ಭಾರಿ ಹೊರೆ ಹೇರಿದಂತೆ ಅಲ್ಲವೆ ;

ಉ) ಹಾಗಿದ್ದಲ್ಲಿ, ಈ ಎಲ್ಲಾದರ ಬಗ್ಗೆ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ, ಇಂಧನ ಹಾಗೂ ವಕ್ಫ್ ಮಂತ್ರಿಗಳು)—

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತನ್ನ ಶಿಫಾರಸ್ಸುಗಳೊಂದಿಗೆ ದರ ಪರೀಕ್ಷಣಾ ಸಮಿತಿಯ ವರದಿಯನ್ನು ದಿನಾಂಕ ೬-೬-೧೯೯೦ರಂದು ಸರ್ಕಾರಕ್ಕೆ ಕಳುಹಿಸಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ

ಆ) ಇಲ್ಲ.

ಇ) ಹೌದು.

ಈ) ಮತ್ತು ಉ) ಎಲ್ಲಾ ಸಂಬಂಧಪಟ್ಟ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ದರ ಪರೀಕ್ಷಣಾ ಸಮಿತಿಯ ವರದಿಯನ್ನು ಪರಿಶೀಲಿಸುವುದು.

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಸದಸ್ಯರಾದ ಶ್ರೀ ಡಿ. ಬಿ. ಚಂದ್ರೇಗೌಡರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಶ್ರೀ ಯಾಹ್ಯಾರವರು ಬಹಳ ಒಳ್ಳೆಯ ಮನುಷ್ಯರು. ಆದರೆ ಇವತ್ತು, ವಿದ್ಯುಚ್ಛಕ್ತಿ ಬೆಲೆಯ ಪರಿಶೀಲನೆ ಸರ್ಕಾರದ ಮುಂದಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಇದು ನಿಜಕ್ಕೂ ರಾಜ್ಯದ ಜನತೆಗೆ, ಕನ್ಸ್ಯೂಮರ್ಸ್‌ಗೆ ದೊಡ್ಡ ಶಾಕ್ ಹೊಡೆಯುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—ಶಾಕ್ ಹೊಡೆಯುತ್ತದೆ ಎಂದು ಹೇಳಿದಿರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹೌದು ದೊಡ್ಡ ಶಾಕ್ ಹೊಡೆಯುತ್ತದೆ.

MR. SPEAKER.—The power in the lines is so weak that it does not shock anybody.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸಚಿವರು ಏನು ಹೇಳಿದ್ದಾರೆ, ಏನೆಂದರೆ, ಟ್ಯಾರಿಫ್ ಕಮಿಟಿಯ ವರದಿ ೬-೬-೯೦ರಂದು ಸರ್ಕಾರದ ಪರಿಶೀಲನೆಗೆ ಬಂದಿದೆ ಎಂದು. ಎಷ್ಟು ಪರ್ಸೆಂಟ್ ಇನ್‌ಕ್ರೀಸ್ ಯಾವ ತರಹದ ಕನ್‌ಸ್ಯೂಮರ್ಸ್‌ಗೆ ಇನ್‌ಕ್ರೀಸ್ ಮಾಡಬೇಕೆಂದು ಇದ್ದಾರೆ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ ? ಏರಿಕೆ ಅನಿವಾರ್ಯಕವೆಂದು ಹೇಳಿರುವುದು ಸರ್ಕಾರದ ಗಮನದಲ್ಲಿದೆಯೇ ? ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಹೇಳಿದ್ದಾರೆ. ಖಂಡಿತವಾಗಿಯೂ ಹೇಳುತ್ತೇನೆ. ಈ ಏರಿಕೆ ತೀರಾ ಅವಶ್ಯಕವೆಂದು ನಮಗಂತೂ ಅನ್ನಿಸುವುದಿಲ್ಲ ತಾವು ಯಾವ ಆಧಾರದ ಮೇಲೆ ಉತ್ತರ ಕೊಟ್ಟಿದ್ದೀರೋ ನಮಗಂತೂ ಅರ್ಥವಾಗುತ್ತಿಲ್ಲ. ಇವೊತ್ತು ಕೆ.ಇ.ಬಿ.ನಲ್ಲಿ ಟ್ರಾನ್ಸ್‌ಮಿಷನ್ ಲಾಸ್ ಏನಿದೆ ಅಥವಾ ಇತರೇ ಸೋರಿಕೆ ಏನಿದೆ, ಅದನ್ನು ಸರಿಮಾಡುವುದಕ್ಕೆ ಮುಂಚೆ ಗಮನಹರಿಸಿ. ಆಗ ಕನ್‌ಸ್ಯೂಮರ್ಸ್ ಸಹಿತ ಸರ್ಕಾರ ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಿದೆ, ಅದರ ಮೇಲೆ ಹೆಚ್ಚು ಮಾಡುವುದಕ್ಕೆ ಹೊರಟಿದ್ದಾರೆ ಎನ್ನುವ ಭಾವನೆಗೆ ಬರುತ್ತಾರೆ. ಟ್ಯಾರಿಫ್ ಕಮಿಟಿ ಯಾವಾಗ ಕಾನ್ಸ್‌ಸ್ಟಿಟ್ಯೂಟ್ ಆಯಿತು ? ಮತ್ತು ಯಾವ ಕನ್‌ಸ್ಯೂಮರ್ಸ್‌ಗೆ ಎಷ್ಟು ಪರ್ಸೆಂಟ್ ಇನ್‌ಕ್ರೀಸ್ ಮಾಡಬೇಕೆಂದು ಇದ್ದೀರಿ ? ಹಾಗೂ ಕೆ.ಇ.ಬಿ.ಯಲ್ಲಿ ಇರತಕ್ಕಂಥ ಟ್ರಾನ್ಸ್‌ಮಿಷನ್ ಲಾಸ್ ಮತ್ತು ಇತರೇ ಸೋರಿಕೆಯನ್ನು ತಡೆಗಟ್ಟಲಿಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಸ್. ಎಂ. ಯಾಹ್ಯಾ.—ಈ ಟ್ಯಾರಿಫ್ ಕಮಿಟಿ ರಿಪೋರ್ಟ್ ಬಂದು ಎರಡು ದಿವಸ ಮಾತ್ರ ಆಗಿದೆ. ಸರ್ಕಾರದ ಎದುರಿಗೆ ಇದು ಟೇಬಲ್ ತಾರೀಖಿಗೆ ಬಂದಿದೆ. ಅದರ ವಿಚಾರ ಇನ್ನೂ ಪರಿಶೀಲನೆಯಲಿ ಮಾತ್ರ ಇದೆ. ಶ್ರೀ ಸಿಂಧ್ಯಾರವರಿಗೆ ಚೆನ್ನಾಗಿ ಗೊತ್ತಿದೆ. ಮೇ ೧೯೮೭ರಲ್ಲಿ ನಿಮ್ಮ ಸರ್ಕಾರವೇ ಟ್ಯಾರಿಫ್ ಅನ್ನು ರೈಸ್ ಮಾಡಿರುವುದು. ೩೦ರಿಂದ ೩೫ ಪರ್ಸೆಂಟ್‌ನಷ್ಟು ಈ ಕಮಿಟಿ ಇರುವಾಗ ನೀವು ರೈಸ್ ಮಾಡಿದಿರಿ. ಆ ದಿವಸ ದೊಡ್ಡ ಪ್ರಮಾಣದಲ್ಲಿ ಏರಿಕೆ ಮಾಡಲು ಕಾರಣ ಏನಿತ್ತು ಎಂದು ಇಲ್ಲಿ ನಾನು ಹೇಳುವುದಿಲ್ಲ. ಆ ಕಾಲದಲ್ಲಿ ಟ್ರಾನ್ಸ್‌ಮಿಷನ್ ಲಾಸ್ ಆಗುತ್ತಿತ್ತು. ಆ ಕಾಲದಲ್ಲಿ ಜೀವನ ಅವಶ್ಯಕ ವಸ್ತುಗಳ ಬೆಲೆ ಹೆಚ್ಚು ಆಗುತ್ತಿತ್ತು. ಕಳೆದ ಎರಡು ಮೂರು ವರ್ಷದಲ್ಲಿ ಜೀವನಾವಶ್ಯಕ ವಸ್ತುಗಳ ಬೆಲೆ ಪೆಚ್ಚಾಗಿದೆ. ಮತ್ತು ಇದರಲ್ಲಿ ವಿದ್ಯುಚ್ಛಕ್ತಿಯೂ ಸಹ ಜೀವನದ ಒಂದು ಪ್ರಮುಖ ವಸ್ತುವಾಗಿದೆ. ಯಾವುದು ಜನರೇಶನ್ ಕಾಸ್ಟ್ ಎಂದು ಇದೆ, ತಮಗೆ ಗೊತ್ತಿರುವ ಹಾಗೆ ಶರಾವತಿಯದ್ದು ಒಂದು ಯೂನಿಟ್‌ಗೆ ೯-೧೦ ಪೈಸೆಯಾದರೆ, ವರಾಹಿದ್ದು, ಮೊನ್ನೆ ಪ್ರಧಾನಿಯವರು ಓಪನ್ ಮಾಡಿದರಂ. ಅದರ ಜನರೇಶನ್ ಕಾಸ್ಟ್ ೫೦ ಪೈಸೆಗಿಂತ ಹೆಚ್ಚು ಆಗುತ್ತದೆ. ಕಾರಣ ಕೇಳಿದರೆ ಬಹಳಷ್ಟು ಕಾರಣಗಳಿವೆ. ಜೀವನ ವಸ್ತುಗಳ ಬೆಲೆ ಎಲ್ಲಾ ಏರುತ್ತಿದೆ. ನೀವು ಸಹ ೧೯೬೭ರ ಮೇನಲ್ಲಿ ೩೦-೩೫ ಪರ್ಸೆಂಟ್‌ನಷ್ಟು ಏರಿಸಿದ್ದೀರಿ. ಈಗ ಎರಡು ಮೂರು ವರ್ಷದಲ್ಲಿ ಪ್ರತಿಯೊಂದರ ಬೆಲೆ ಹೆಚ್ಚಾಗುತ್ತಿದೆ. ಯಾವುದರ ಬೆಲೆಯೂ ಕಡಿಮೆ ಆಗಿಲ್ಲ. ಕೇಂದ್ರ ಸರ್ಕಾರದವರು ಬೇಕಾದಷ್ಟು ಬೆಲೆಗಳನ್ನು ಏರಿಸಿದ್ದಾರೆ, ಅದರಲ್ಲಿ ಡೀಸಲ್, ಪೆಟ್ರೋಲ್ ಬೆಲೆಗಳನ್ನು ಏರಿಸಿದ್ದಾರೆ. ಆದಕ್ಕಾಗಿ ವಿದ್ಯುಚ್ಛಕ್ತಿ ಉಪಯೋಗಿಸುವ ೫೦ ಲಕ್ಷ ಕನ್‌ಸ್ಯೂಮರ್ಸ್ ಇದ್ದಾರೆ. ಈ ಟ್ರಾನ್ಸ್‌ಮಿಷನ್ ಲಾಸ್ ಎಂದು ಹೇಳಿದರೆ, ಎಲ್ಲಾ ಹಳ್ಳಿಗಳಿಗೂ ಇದನ್ನು ತಲುಪಬೇಕೆಂದು ಹೇಳುತ್ತೇವೆ, ಬಹಳ ಉದ್ದದ ಕೆ.ವಿ. ಲೈನುಗಳು ಇವೆ.

ಅದರಿಂದ ಸಹ ಬಹಳ ಹೆಚ್ಚು ಟ್ರಾನ್ಸ್‌ಮಿಷನ್ ಲಾಸ್ ಆಗಲಿಕ್ಕೆ ಸಾಧ್ಯವಿದೆ. ಆ ಟ್ರಾನ್ಸ್‌ಮಿಷನ್ ಲಾಸನ್ನು ಕಡಿಮೆಮಾಡಬೇಕು ಎನ್ನುವುದು ಸರ್ಕಾರದ ಗವರ್ನಮೆಂಟಲ್ಲಿದೆ ಮತ್ತು ಕಡಿಮೆ ಮಾಡ ಬೇಕಾದರೆ ವೈರ್ಸ್ ಎಲ್ಲಾ ಬಹಳಷ್ಟು ಚೇಂಜ್ ಮಾಡಬೇಕಾಗುತ್ತದೆ, ಟ್ರಾನ್ಸ್‌ಫಾರ್ಮರ್ಸ್ ಚೇಂಜ್ ಮಾಡಬೇಕಾಗಿದೆ. ಅದಕ್ಕೆ ನೂರಾರು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ವರ್ಷ ಬರೀ ಹತ್ತು ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಆದರೆ ಇನ್ನೂ ಬೇಕಾದಷ್ಟು ಹಣವನ್ನು ಖರ್ಚು ಮಾಡಬೇಕು ಎಂದು ನಾವು ಒಂದು ನೀತಿಯನ್ನೂ ಸಹ ಇಟ್ಟುಕೊಂಡಿದ್ದೇವೆ. ಯಾವಾಗ ಜೀವನಾವಶ್ಯಕ ವಸ್ತುಗಳ ಬೆಲೆ ಹೆಚ್ಚಾಗುತ್ತಾ ಹೋಗುತ್ತದೆಯೋ ಆ ಕಾರಣದಿಂದ ಇದರ ಬೆಲೆ ಸಹ ಸ್ವಾಭಾವಿಕವಾಗಿ ಹೆಚ್ಚಾಗುತ್ತಾ ಹೋಗುತ್ತದೆ, ಅದು ಇನ್ನೆವಿಟಬಲ್, ನಾವು ಹೆಚ್ಚು ಮಾಡಬೇಕು ಎಂದು ಇಲ್ಲ. ಈವರೆಗೆ ಮೂರು ವರ್ಷಗಳಲ್ಲಿ ಆದಂಥ ಲಾಸನ್ನೂ ಸಹ ಹೇಳುವುದಾದರೆ ಅದು ೨೦೦ ಕೋಟಿಗಿಂತಲೂ ಹೆಚ್ಚು ಲಾಸ್ ಆಗಿದೆ. ಅಕ್ಯುಮುಲೇಟೆಡ್ ಲಾಸ್ ಹೇಳುವುದಾದರೆ. ೧೯೮೬-೮೭ ರಲ್ಲಿ ಆಗ ನಿಮ್ಮ ಸರ್ಕಾರ ಇತ್ತು, ಆಗ ೭೪ ಕೋಟಿ ಲಾಸ್‌ಟು ಕೆ. ಇ. ಬಿ. ೧೯೮೭-೮೮ ರಲ್ಲಿ ಆಗಲೂ

ನೀವು ಇದ್ದಿರಿ, ಆಗ ೧೧೪ ಕೋಟಿ ಲಾಸ್ ಆಗಿದೆ. ಆಮೇಲೆ ೧೯೮೮-೮೯ರಲ್ಲಿ ೫೦ ಕೋಟಿ ಲಾಸ್ ಆಗಿದೆ. ಹೀಗೆ ೨೦೦ ಕೋಟಿಗಿಂತಲೂ ಹೆಚ್ಚು ಅಕ್ಯುಮುಲೇಟೆಡ್ ಲಾಸ್ ಇದೆ. ಅದಕ್ಕೆ ಕಾರಣ ನಿಮ್ಮ ಗೊತ್ತಿದೆ, ಸರ್ಕಾರದಲ್ಲಿ ಆಗ ನೀವು ಇದ್ದಿರಿ. ಆಲ್ ಇಂಡಿಯಾ ಎಲೆಕ್ಟ್ರಿಸಿಟಿ ಆಕ್ಟ್ ಪ್ರಕಾರ ೩ ಪರ್ಸೆಂಟ್ ಪ್ರಾಫಿಟ್ ಮಾಡಿ ನಡೆಸಬೇಕು ಎಂದು ಆದರಲ್ಲಿದೆ. ಈ ಎಲ್ಲಾ ಕಾರಣಗಳಿಂದ ನಾವು ಹೆಚ್ಚು ಮಾಡಬೇಕು ಎಂದು ಇಲ್ಲದೇ ಇದ್ದರೂ, ಸರ್ಕಾರಕ್ಕೂ ಹೆಚ್ಚು ಮಾಡಬೇಕು ಎಂದು ಮನಸ್ಸಿಲ್ಲ, ಆದರೆ ಮಾಡಲೇಬೇಕು ಇನ್ನೆವಿಟಿಬಲ್ ಆಗುತ್ತದೆ. ಅದನ್ನು ಸೈಂಟಿಫಿಕ್ ರೂಪದಲ್ಲಿ ಜೂಡಬೇಕು. ಮೊದಲೆಲ್ಲಾ ಅಷ್ಟು ಸೈಂಟಿಫಿಕ್ ರೂಪದಲ್ಲಿ ಮಾಡಲಿಲ್ಲ. ಎಕ್ಸ್‌ಪರ್ಟ್ಸ್‌ನಿಂದ ಎಲ್ಲಾ ಮಾಡಿಸಿ, ಕಳೆದ ಮಾರ್ಚಿಯಲ್ಲಿ ಒಂದು ಕಮಿಟಿ ಮಾಡಿ ಆದರ ರಿಪೋರ್ಟ್ ಬಂದಿದೆ. ಪೈಲಿ ಸೈಂಟಿಫಿಕ್ಕಾಗಿ ನಾವು ಮಾಡಿದ್ದೇವೆ. ಆದುದರಿಂದ ಇದು ಇನ್ನೆವಿಟಿಬಲ್ ಆದರೆ ಖಂಡಿತವಾಗಿ ನಾವು ಏರಿಸಬೇಕಾಗುತ್ತದೆ. ಏರಿಸುವಾಗ ಜನಸಾಮಾನ್ಯರಿಗೆ ಆದಷ್ಟು ತೊಂದರೆ ಕಡಿಮೆ ಆಗಬೇಕು ಎಂದು ನಾವು ಯೋಚಿಸಿಮಾಡಿ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಹಿರಿಯರು ಮತ್ತು ಅನುಭವಿ ಮಂತ್ರಿಗಳಾದಂಥ ಸನ್ಮಾನ್ಯ ಯಾಹ್ಯಾರವರಿಂದ ನಾನು ಈ ಉತ್ತರವನ್ನು ನಿರೀಕ್ಷೆ ಮಾಡಿರಲಿಲ್ಲ. ಸದನದಲ್ಲಿ ಒಂದು ಪ್ರವೃತ್ತಿ ಏನಾಗಿದೆಯೆಂದರೆ. ನೀವು ಇದನ್ನೇ ಮಾಡಿದಿರಿ ಈಗ ಆ ಕಡೆ ಕುಳಿತುಕೊಂಡಿದ್ದೀರಿ, ನೀವು ೨೫ ಸಾವಿರ ಟ್ರಾನ್ಸ್‌ಫರ್ ಮಾಡಿದ್ದೀರಿ, ಈಗ ಇರ್ಷಕ್ಕೆ ೧೦ ಪರ್ಸೆಂಟ್ ಜಾಸ್ತಿಯಾಗಿದೆ, ನಾವು ಒಂದು ೩೫ ಸಾವಿರ ಟ್ರಾನ್ಸ್‌ಫರ್ ಮಾಡಿದ್ದೇವೆ, ನಿಮ್ಮ ಕಾಲದಲ್ಲಿ ಅಷ್ಟು ಲಾಸ್ ಇತ್ತು, ಈಗಲೂ ಇಷ್ಟು ಲಾಸ್ ಇದೆ ಎಂದು ಹೇಳುವಂಥಾದ್ದು ನಡೆದಿದೆ. ಆದುದರಿಂದಲೇ ನಾವು ಇಲ್ಲಿ ಬಂದು ಕುಳಿತುಕೊಂಡಿರತಕ್ಕದ್ದು. ಇಲ್ಲದೇ ಹೋದರೆ ನಾವೇ ಅಲ್ಲಿ ಕುಳಿತುಕೊಳ್ಳುತ್ತಾ ಇದ್ದೆವು. ನಾನು ತಮ್ಮಿಂದ ಈ ಒಂದು ಉತ್ತರವನ್ನು ನಿರೀಕ್ಷೆ ಮಾಡಿರಲಿಲ್ಲ. ನಾನು ಏನು ನಿರೀಕ್ಷೆ ಮಾಡಿದ್ದೆ ಅಂದರೆ...

ಶ್ರೀ ವಾಟಾಳ್ ನಾಗರಾಜ್.—ಅದು ಒಂದೇ ಕಾರಣದಿಂದ ಅಲ್ಲ. ಅನೇಕ ಕಾರಣಗಳಿವೆ ಇಲ್ಲಿ ಬರುವುದಕ್ಕೆ, ಅದು ಒಂದೇ ಕಾರಣದಿಂದ ಇಲ್ಲಿ ಬರಲಿಲ್ಲ.

ಶ್ರೀ ಎಂ ಮಹದೇವ್.—ಮಾನ್ಯ ಸಿಂಧ್ಯರವರೆ, ನೀವು ಮಂತ್ರಿಯಾಗದೇ ಇದ್ದಿದ್ದರೆ ಈ ಪ್ರಶ್ನೆ ಬರುತ್ತಾ ಇರಲಿಲ್ಲ. ನೀವು ಮಂತ್ರಿಯಾಗಿದ್ದವರು ವರ್ಗಾವಣೆ ವಿಷಯ ಪ್ರಸ್ತಾಪ ಮಾಡಿದಾಗ ಈ ಪ್ರಶ್ನೆ ಬರುತ್ತದೆ. ಬೇರೆಯವರು ಪ್ರಸ್ತಾಪ ಮಾಡಿದ್ದರೆ ಅಷ್ಟು ಸೀರಿಯಸ್ಸಾಗಿ ತೆಗೆದುಕೊಳ್ಳುವುದಿಲ್ಲ. ಹಿಂದಿನ ಸರ್ಕಾರದಲ್ಲಿ ನೀವು ಮಂತ್ರಿಯಾಗಿದ್ದಿರಿ ಈಗ ಪ್ರಸ್ತಾಪ ಮಾಡಿದ್ದೀರಿ. ಆದ್ದರಿಂದ ಸೀರಿಯಸ್ಸಾಗಿ ತೆಗೆದುಕೊಳ್ಳುತ್ತಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ.—ಮಾನ್ಯ ಸದಸ್ಯರಿಗೆ ತಾವು ದಯವಿಟ್ಟು ಹೇಳಬೇಕು. ವರ್ಗಾವಣೆ ಬಗ್ಗೆ ನಮಗೇ ಹೇಸಿಗೆಯಾಗಿಬಿಟ್ಟಿದೆ, ಪಾಪ ಮಂತ್ರಿಗಳಪಾಡೇನು. ಸದ್ಯಕ್ಕೆ ನಮಗೆ ಇಲ್ಲವಲ್ಲ, ನಾವು ಆರಾಮವಾಗಿದ್ದೇವೆ. ಎಷ್ಟು ಯಾತನೆ ಅನುಭವಿಸಿದ್ದಾರೆ ಎನ್ನುವುದು ಮಂತ್ರಿಗಳಿಗೂ ಗೊತ್ತಿದೆ. ಅದು ನಮ್ಮ ಶತ್ರುಗಳಿಗೂ ಬೇಡ ಎಂದು ನನಗಾದರೂ ಅನಿಸುತ್ತದೆ. ನಾನು ಪ್ರಾಸ್ತಾವಿಕವಾಗಿ ಏಕೆ ಹೇಳಿದೆ ಎಂದರೆ, ಆವರು ಹೇಳಿದರು, ನೀವು ಮಾಡಿದ್ದೀರಿ ಆದರಿಂದ ನಾವೂ ಮಾಡಿದ್ದೇವೆ. ೧೯೮೬ರಲ್ಲಿ ಬೆಲೆಗಳೆಲ್ಲಾ ಕಡಿಮೆ ಇತ್ತು. ಈಗ ಬೆಲೆಗಳೆಲ್ಲಾ ಜಾಸ್ತಿಯಾಗಿದೆ, ಆದುದರಿಂದ ನಾವು ೧೦ ಪರ್ಸೆಂಟ್ ಜಾಸ್ತಿ ಮಾಡಿದ್ದೇವೆ ಅಂದರೆ ಇದರಿಂದ ಏನೂ ಉಪಯೋಗವಾಗುವುದಿಲ್ಲ ಎಂದು ನಾನಂ ತಿಳಿದಿದ್ದೇನೆ. ಟ್ಯಾರೀಫ್ ಕಮಿಟಿ ರಿಪೋರ್ಟ್ ಬಂದು ಎರಡು ದಿವಸ ಮಾತ್ರ ಆಗಿದೆ, ನಾನಂ ಇನ್ನೂ ಓದಿಲ್ಲ ಏನ್ನುವ ಪೂರ್ವಾಗ್ರಹ ಹೇಳಿದ್ದೀರಿ. ಅನುಭವಿಗಳಾಗಿರತಕ್ಕ. ಹಿಂದೆ ಫೈನಾನ್ಸ್ ಮಿನಿಸ್ಟರ್ ಆಗಿರತಕ್ಕ ನಿಮಗೆ ಎರಡು ಗಂಟೆ ಸಾಕಾ ಎಂದು ನಾನು ತಿಳಿಸಿದ್ದೇನೆ. ನೀವು ಮಾನಿಸಿಪಲ್ ಮತ್ತು ಕಾರ್ಪೊರೇಷನ್ ಎಲೆಕ್ಷನ್ ಆದ ತಕ್ಷಣ ಯಾವ ರೀತಿ ಕೆ.ಎಸ್.ಆರ್.ಟಿ.ಸಿ ಬಸ್‌ಗಳ ದರವನ್ನು ಅನೌನ್ಸ್ ಮಾಡಿದ್ದೀರಿ ಅದೇ ರೀತಿಯಲ್ಲಿ ಇದಕ್ಕೂ ಅನೌನ್ಸ್ ಮಾಡಬೇಕು ಎಂದು ಇದ್ದೀರಿ.

ಅಧ್ಯಕ್ಷರು.—ತಾವು ಉಪ ಪ್ರಶ್ನೆ ಕೇಳಿ.

ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಸಿಂಧ್ಯರವರು ಎಷ್ಟು ದೊಡ್ಡ ಪ್ರಿಯಾಂಬಲ್ ಕೊಡುತ್ತಿದ್ದಾರೆ, ನನಗೆ ಉತ್ತರ ಕೊಡಲಿಕ್ಕೆ ಇದಕ್ಕಿಂತ ದೊಡ್ಡ ಪ್ರಿಯಾಂಬಲ್ ಕೊಡಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ನಾನು ಸಪ್ಲಿಮೆಂಟರಿ ಕೊಶ್ಚನ್‌ಗೆ ಬಂದಂ ಬಿಡಂತ್ತೇನೆ. ಮುನಿಸಿಪಾಲಿಟಿ, ಕಾರ್ಪೊರೇಷನ್‌ಗಳ ಎಲೆಕ್ಷನ್ ಆದ ತಕ್ಷಣ ಕೆ.ಎಸ್.ಆರ್.ಟಿ.ಸಿ. ದರಗಳನ್ನು ಯಾವರೀತಿ ಹೆಚ್ಚು ಮಾಡಿದಿರೋ ಆದೇರೀತಿ ಸದನ ಆಗುವವರೆಗೂ ಸಹ ನೀವು ಕಾದಿದ್ದೀರಾ ? ಆದನ್ನು ಎರಡೂ ದಿನಕ್ಕೋ ಮೂರು ದಿನಕ್ಕೋ ಅನೌನ್ಸ್ ಮಾಡುತ್ತಾ ಇದ್ದೀರಿ. ದಯವಿಟ್ಟು ಆ ಪ್ರಶ್ನೆ ಸ್ಪೆಸಿಫಿಕ್ ತಾನೇ. ಇದಕ್ಕೆ ಪ್ರಿಯಾಂಬಲ್ ಹಾಕಿಲ್ಲ, ಇದನ್ನು ತಾವು ಉತ್ತರ ಕೊಡಬೇಕಂ.

ನಾನು ಏನೂ ಹಾಕೋಲ್ಲ. ಎರಡನೆಯದಾಗಿ ತಾವು ಮಾರ್ಜಿಯಲ್ಲಿ ಒಂದು ಕಮಿಟಿಯನ್ನು ಮಾಡಿದ್ದೇವೆಂದು ಹೇಳಿದ್ದೀರಿ. ೧೯೮೬ನೇ ಇಸವಿಯಲ್ಲಿ ಟ್ಯಾರಿಫ್ ಕಮಿಟಿಯನ್ನು ಮಾಡಿರತಕ್ಕದ್ದು ನಿಜ. ಮಾರ್ಜಿಯಲ್ಲಿ ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡಿದ್ದೇವೆಂದು ಹೇಳಿದ್ದೀರಿ. ಅವರು ಏನು ರೆಕಮೆಂಡ್ ಮಾಡಿದ್ದಾರೆ ? ಎಷ್ಟು ಮಾಡಬೇಕೆಂದು ಮಾಡಿದ್ದಾರೆ ? ಗ್ರಾಹಕರಿಗೆ ಯಾವ ತರಹ ಜಾಸ್ತಿ ಮಾಡಬೇಕೆಂದು ಮಾಡಿದ್ದೀರಿ ಅದನ್ನು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಎಸ್.ಎಂ. ಯಾಹ್ಯ.—ಮಾನ್ಯ ಸಿಂಧ್ಯಾರವರು ಗವರ್ನಮೆಂಟ್ ಕೊಡಬೇಕು, ನಾನು ಪರಿಶೀಲನೆಯಲ್ಲಿದೆ ಎಂದು ಹೇಳಿದೆ. ರಿಪೋರ್ಟ್ ಒಂದು ಎರಡು ದಿವಸ ಆಗಿದೆಯೆಂದು ಹೇಳಿದೆ. ನಾನು ಆ ರಿಪೋರ್ಟ್‌ನ್ನು ಓದಲಿಲ್ಲವೆಂದು ಹೇಳಲಿಲ್ಲ. ಪರಿಶೀಲನೆಯೆಂದರೂ ಹೇಳುವುದಕ್ಕೂ ಓದುವುದಕ್ಕೂ ವ್ಯತ್ಯಾಸವಿದೆ. ಅದಕ್ಕೆ ಈ ವಿಚಾರದಲ್ಲಿ ತಾವೇನು ಆತುರ ತೋರಿಸುತ್ತಿದ್ದೀರಿ ಬಹಳ ರೈಸ್ ಮಾಡುತ್ತಿದ್ದಾರೆಂದು ಹೇಳುತ್ತೀರಿ, ಅಲ್ಲಿ ಕಾಳಿತರೆ ಅದು ಬರುತ್ತದೆ ನಿಜ. ನಾವು ಅಲ್ಲಿ ಕುಳಿತರೆ ಅದು ಬರುತ್ತದೆ, ನಾವೀಗ ಪ್ರಾಕ್ಟಿಕಲ್ ಆಗಿ ಏನು ಮಾಡಬೇಕು ? ನೀವು ಎಷ್ಟು ಲಾಸನ್ನು ನಮ್ಮ ಮೇಲೆ ಬಿಟ್ಟಿದ್ದೀರಿ? ೨೨೦ ಕೋಟಿ ರೂಪಾಯಿ ಅಕ್ಯುಮುಲೇಟ್ ಲಾಸ್ ಆಗಿದೆ. ಮೂರು ವರ್ಷಗಳಲ್ಲಿ ಅಷ್ಟೊಂದು ಲಾಸ್ ಆಗಿದೆ. ಆದ್ದರಿಂದ ಕೆಇಬಿ ಯನ್ನು ಮುಚ್ಚಬೇಕೆ ? ೫೦ ಲಕ್ಷ ಗ್ರಾಹಕರು ಇದ್ದಾರೆ ಅವರಿಗೆ ಸಹಾಯ ಮಾಡಬೇಕೋ ಬಿಡಬೇಕೆ ಎನ್ನುವುದು ಪ್ರಶ್ನೆ. ನಾವು ಹೆಚ್ಚು ಹೆಚ್ಚು ಮಾಡಬೇಕೆಂದು ಇಲ್ಲ. ಅದು ಸರ್ಕಾರದ ನೀತಿಯೂ ಅಲ್ಲ. ಇದು ಅನಿವಾರ್ಯ. ಈ ಸಿಸ್ಟಮ್‌ನಲ್ಲಿ ಕೆಇಬಿ ಯನ್ನು ನಡೆಸಬೇಕಾದರೆ ಅದಕ್ಕೆ ಹಣ ಬೇಕಾಗುತ್ತದೆ. ಅಕ್ಕಿ ಬೆಲೆ ಹೆಚ್ಚಾದರೆ, ಗೋಧಿ ಬೆಲೆ ಜಾಸ್ತಿಯಾದರೆ ತರಕಾರಿ ಬೆಲೆ ಜಾಸ್ತಿಯಾದರೆ ಜೀವನಕ್ಕೆ ಬೇಕಾದ ವಸ್ತುಗಳ ಬೆಲೆ ಜಾಸ್ತಿಯಾದರೆ ಏನು ಮಾಡಬೇಕು ? ಎಲೆಕ್ಟ್ರಿಸಿಟಿ ಕೂಡ ಜೀವನಕ್ಕೆ ಬೇಕಾದ ವಸ್ತುವಾಗಿದೆ. ಆದರೆ ಇಷ್ಟೊಂದು ಲಾಸ್ ಆಗಿದೆ ಪ್ರೊಡೆಕ್ಟೀವ್ ಕಾಸ್ಟ್ ಜಾಸ್ತಿಯಾಗಿದೆ. ಜನರೇಟರ್ ಬೆಲೆ ಜಾಸ್ತಿಯಾಗಿದೆ, ಟ್ರಾನ್ಸ್‌ಫಾರ್ಮರ್ ಲಾಸ್ ಹೆಚ್ಚಾಗಿದೆ. ಹೊಸ ಹೊಸ ವೈರ್‌ಗಳನ್ನು ಹಾಕಬೇಕೆಂದು ನಾವಿದ್ದೇವೆ. ಎಸ್ಟಾಬ್ಲಿಶ್‌ಮೆಂಟ್ ಚಾರ್ಜಸ್ ಹೆಚ್ಚಾಗಿದೆ. ೫೦ ಸಾವಿರ ನೌಕರರು ಇದ್ದಾರೆ. ಮೂರು ಸಾವಿರ ಜನ ಇಂಜಿನಿಯರ್‌ಗಳು ಇದ್ದಾರೆ. ಇದು ಬಹಳ ದೊಡ್ಡ ಆರ್ಗನೈಸೇಷನ್ ಇದಕ್ಕೆ ವರ್ಷಕ್ಕೆ ೧೬೦ ಕೋಟಿ ರೂಪಾಯಿ ಸ್ಯಾಲರಿ ಬಿಲ್ ಆಗುತ್ತದೆ. ಇದನ್ನೆಲ್ಲಾ ಯೋಚನೆ ಮಾಡಿಕೊಂಡು ಬೆಲೆಯನ್ನು ಏರಿಸಬೇಕಾಗುತ್ತದೆ. ಬೆಲೆಯನ್ನು ಏರಿಸುವುದು ಬೇಡವೆಂದು ನಿಷ್ಕ್ರಿಯಾಗಿ ನಮ್ಮ ಮನಸ್ಸಿನಲ್ಲಿಯೂ ಸಹ ಇದೆ. ಅನಿವಾರ್ಯವಾಗಿ ಈ ಇಲಾಖೆಯನ್ನು ನಡೆಸಿಕೊಂಡು ಹೋಗಬೇಕು, ಅದನ್ನು ಮುಚ್ಚುವುದಕ್ಕೆ ಆಗುವುದಿಲ್ಲ. ಕೆಇಬಿ ಯನ್ನು ಮುಚ್ಚಿವುದಕ್ಕೆ ಆಗುವುದಿಲ್ಲ,

ಅಧ್ಯಕ್ಷರು.—ಶ್ರೀ ಕೆ. ಲಕ್ಕಣ್ಣನವರು.. ...

(ಗೊಂದಲ)

ಅಧ್ಯಕ್ಷರು.—ಚರ್ಚೆಗೆ ಅವಕಾಶ ಕೊಡುತ್ತೇನೆ, ಅವರ ಡಿಮಾಂಡ್ ಬಂದಾಗ ಖಂಡಿತ ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಇದಲ್ಲ ಸ್ವಾಮಿ, ವಿದ್ಯುಚ್ಛಕ್ತಿ ದರವನ್ನು ಏರಿಸತಕ್ಕದ್ದು ರಾಜ್ಯದ ಜನತೆಗೆ ದ್ರೋಹ ಮಾಡಿದಂತಾಗುತ್ತದೆ. ಈಗಾಗಲೇ ಬೆಲೆಗಳು ಏರಿ ಜನ ತತ್ತರಿಸಿ ಹೋಗಿದ್ದಾರೆ. ವಿದ್ಯುಚ್ಛಕ್ತಿ ದರವನ್ನು ಏರಿಸಿದರೆ ಜನರು ತತ್ತರಿಸಿ ಹೋಗುತ್ತಾರೆ. ಪ್ರಶ್ನೋತ್ತರ ಮುಗಿದ ನಂತರ ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಮಾನ್ಯ ನಾಗರಾಜ್‌ರವರು ತಾವು ಸ್ವಲ್ಪ ರೂಲ್ಸ್ ನೋಡಿ, ಅರ್ಧ ಗಂಟೆ ಚರ್ಚೆ ಅವಕಾಶವಿದೆ. ತಾವು ನನಗೆ ಒಂದು ನೋಟೀಸ್ ಕೊಡಿ.

ಶ್ರೀ ವಾಟಾಳ್ ನಾಗರಾಜ್.—ನಿನ್ನೆ ತಮಗೆ ಒಂದು ನೋಟೀಸ್ ಕೊಟ್ಟಿದ್ದೇನೆ.

ಶ್ರೀ ಪಿ.ಜಿ ಆರ್. ಸಿಂಧ್ಯ.—ಟ್ಯಾರಿಫ್ ಕಮಿಟಿ ರಿಪೋರ್ಟ್ ಪ್ರಕಾರ ಬೆಲೆಗಳನ್ನು ಜಾಸ್ತಿ ಮಾಡಿದರೆ ಅಕ್ಯುಮುಲೇಟೆಡ್ ಲಾಸಸ್‌ನಲ್ಲಿ ಇನ್ನು ಎಷ್ಟು ಉಳಿಯುತ್ತದೆ. ಅದಕ್ಕೆ ದಯವಿಟ್ಟು ಉತ್ತರ ಹೇಳಬೇಕು.

ಅಧ್ಯಕ್ಷರು.—ಹೈಪಾಥಟಿಕಲ್ ಕೊಶ್ಚನ್ ಇದು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಹೈಪಾಥೆಟಿಕಲ್ ಕೊಶ್ಚನ್ ಇದು. ಟ್ರಾನ್ಸ್‌ಫಾರ್ಮರ್ ಲಾಸಸ್ ಬಗ್ಗೆ ನಾನು ಹೇಳಲಿಲ್ಲ, ಡಿಮಾಂಡ್ ಬಂದಾಗ ಆ ಬಗ್ಗೆ ಮಾತನಾಡುತ್ತೇನೆ. ಟ್ರಾನ್ಸ್‌ಮಿಷನ್ ಲಾಸಸ್ ಬಗ್ಗೆ ವೈರ್‌ಗಳನ್ನು ಬದಲಾಯಿಸಬೇಕು ಅದೆಲ್ಲಾ ಸರಿ. ಆದರೆ ಸಾವಿರ ಜನ ಯಾರೋ ಜನ ಇದ್ದಾ

ರೆಂದು, ತಾವು ಹೇಳಿದಿರಿ ಅವರಿಂದ ಎಷ್ಟು ಲಾಸ್ ಆಗುತ್ತದೆ ? ಅದನ್ನು, ನಿಲ್ಲಿಸುವುದಕ್ಕೆ ಕ್ರಮ ಏನು ತೆಗೆದುಕೊಂಡಿದ್ದೀರಿ ? ದಯವಿಟ್ಟು ಹೇಳಿ.

(ಗೊಂದಲ)

ಅಧ್ಯಕ್ಷರು —ನಾನು ಯಾವ ಸದಸ್ಯರ ಹೆಸರನ್ನು ಕರೆಯುತ್ತೇನೆ, ಆ ಸದಸ್ಯರು ಕೇಳಿದ ಪ್ರಶ್ನೆಗಳು ಮಾತ್ರ ನಡವಳಿಕೆಗೆ ಹೋಗುತ್ತದೆ.

ಶ್ರೀ ಎಸ್.ಎಂ. ಯಾಹ್ಯಾ.—ಅಕ್ಯುಮುಲೇಟೆಡ್ ಲಾಸ್ ೨೭೦ಕೋಟಿ ರೂಪಾಯಿ, ಅದು ಅಲ್ಲದೆ ಟ್ರಾನ್ಸ್‌ಮಿಷನ್ ಲಾಸ್ ಒಂದುರೀತಿ ನೀವು ಹೇಳಿದ ಹಾಗೆ ಟ್ರಾನ್ಸ್‌ಮಿಷನ್ ಲಾಸ್ ಆಗಲಿಕ್ಕೆ ಬೇರೆ ಬೇರೆ ಕಾರಣಗಳು ಇವೆ. ಕದಿಯುತ್ತಾರೆಂದು ನಮಗೆ ಗೊತ್ತಿದೆ. ಅದರ ಬಗ್ಗೆ ಇನ್ನೊಂದು ಪ್ರಶ್ನೆಗೆ ನಾನು ಇವೊತ್ತೇ ಉತ್ತರವನ್ನು ಕೊಡುತ್ತೇನೆ. ಎಷ್ಟು ಕದ್ದಿದ್ದಾರೆ ಎಂದು ಹೇಳುತ್ತೇನೆ. ವಿಜಿಲೆನ್ಸ್ ಸ್ಕ್ವಾಡನು ಬಹಳ ಸ್ಟ್ರಾಂಗ್‌ಟನ್ ಮಾಡಿ ಇನ್ನೂ ಎರಡು ಎಸ್.ಪಿ.ಗಳನ್ನು ಈಗತಾನೇ ಇಟ್ಟಿದ್ದೇವೆ ಬೇಕಾದಷ್ಟು ಕೇಸುಗಳನ್ನು ಹಿಡಿದಿದ್ದೇವೆ. ಎಷ್ಟು ಹಣ ಬಂದಿದೆ ನಮಗೆ ಎನ್ನುವ ಬಗ್ಗೆ ಇನ್ನೊಂದು ಪ್ರಶ್ನೆ ಇದೆ ಅದಕ್ಕೆ ನಾನು ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಶ್ರೀ ವಾಟಾಳ್ ನಾಗರಾಜ್‌ರವರ ಉಪ ಪ್ರಶ್ನೆ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ತಾವು ನಷ್ಟವಾಗಿದೆ ಎಂದು ಹೇಳುತ್ತಿದ್ದೀರಿ. ಸಾಮಾನ್ಯ ಬಳಕೆದಾರನಿಗೆ ನಷ್ಟವಾಗಿದೆಯೆ, ಅಥವಾ ದೊಡ್ಡ ದೊಡ್ಡ ಬಳಕೆದಾರರಿಗೆ ನಷ್ಟವಾಗಿದೆಯೆ ಅದು ಎಷ್ಟು ನಷ್ಟವಾಗಿದೆ. ಈ ಹೊರೆಯನ್ನು ಸಾಮಾನ್ಯ ಬಳಕೆದಾರರ ಮೇಲೆ ಹೊರಿಸಿದರೆ ಆ ಜನರಿಗೆ ಬಹಳ ಹೊರೆಯಾಗುತ್ತದೆ. ಆದ್ದರಿಂದ, ದಯವಾಡಿ ತಾವು ಇದನ್ನು ನಿಲ್ಲಿಸತಕ್ಕ ನಿರ್ಧಾರವನ್ನು ಸರ್ಕಾರ ದವರು ಕೈಗೊಳ್ಳುತ್ತೀರಾ ?

ಶ್ರೀ ಎಸ್.ಎಂ. ಯಾಹ್ಯಾ.—ರಿಪೋರ್ಟ್ ನಮ್ಮ ಪರಿಶೀಲನೆಯಲ್ಲಿದೆ. ಈ ರಿಪೋರ್ಟ್ ನಮಗೆ ಬಂದು ಎರಡು ದಿವಸ ಆಯಿತು ಎಂದು ಹೇಳಿದೆ. ಆದರಲ್ಲಿ ಪರಿಶೀಲನೆ ಮಾಡಿ, ಜನಸಾಮಾನ್ಯರಿಗೆ ಆದಷ್ಟು ಕಡಿಮೆ ತೊಂದರೆಯಾಗುವ ರೀತಿಯಲ್ಲಿ ನಾವು ವರ್ತನೆ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೇ, ವಿದ್ಯುತ್‌ನ್ನು ಕದಿಯುತ್ತಾರೆ ಎನ್ನತಕ್ಕದ್ದನ್ನು ಸರ್ಕಾರ ದವರು ಒಪ್ಪಿಕೊಂಡಿದ್ದಾರೆ.

ಅಧ್ಯಕ್ಷರು.—ಇನ್ನೊಂದು ಪ್ರಶ್ನೆ ಇದೆ, ಆಗ ನಿಮಗೆ ಅವಕಾಶ ಕೊಡುತ್ತೇನೆ.

ಸ್ಟೀಲ್ ಫರ್ನಿಚರ್ಸ್ ಒದಗಿಸಲು ನೋಂದಾಯಿಸಿರುವ ಸಣ್ಣ ಕೈಗಾರಿಕೆಗಳು

೧೮. ಶ್ರೀ ಕೆ. ಲಕ್ಕಣ್ಣ. (ರಾಜಾಜಿನಗರ).—ಮಾನ್ಯ ಸಣ್ಣ ಕೈಗಾರಿಕೆಗಳ ಉಪ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರಕ್ಕೆ ಸ್ಟೀಲ್ ಫರ್ನಿಚರ್ಸ್ ಒದಗಿಸುವ ಸಲುವಾಗಿ ಕರ್ನಾಟಕ ಸಣ್ಣ ಕೈಗಾರಿಕೆಗಳ ವಾರುಕಟ್ಟೆ ನಿಗಮದಲ್ಲಿ ನೋಂದಾಯಿಸಿರುವ ಸಣ್ಣ ಕೈಗಾರಿಕೆಗಳೆಷ್ಟು?

ಆ) ನೋಂದಾಯಿಸಿರುವ ಘಟಕಗಳಿಗೆಲ್ಲ ಸ್ಟೀಲ್ ಫರ್ನಿಚರ್ಸ್ ಒದಗಿಸಲು ಆದೇಶ ನೀಡ ಲಾಗಿದೆಯೇ. ಹಾಗಿದ್ದಲ್ಲಿ, ಯಾವ ಯಾವ ಘಟಕಗಳಿಗೆ ಎಷ್ಟು ಮೌಲ್ಯದ ಫರ್ನಿಚರ್ಸ್ ಒದಗಿಸಲು ಆದೇಶಿಸಲಾಗಿದೆ :

೧) ಈವರೆವಿಗೂ ಆದೇಶ ಪಡೆಯದಿರುವ ಘಟಕಗಳೆಷ್ಟು,

೨) ಸರ್ಕಾರಕ್ಕೆವರ್ಷ ಪೂರ್ತಿ ಬೇಕಾಗುವ ಫರ್ನಿಚರ್ಸ್‌ನ್ನು ಒದಗಿಸುವ ಆದೇಶವನ್ನು ಕೆ.ಎಸ್.ಎಂ.ಸಿ.ಯವರು ಪಡೆದು ನೋಂದಾಯಿಸಿರುವ ಎಲ್ಲಾ ಘಟಕಗಳಿಗೆ ಸಮಾನವಾಗಿ ಹಂಚಲು ಕ್ರಮ ಕೈಗೊಳ್ಳಲಾಗುವುದೆ ?

ಶ್ರೀಮತಿ ಸುಮಾ ವಸಂತ (ಸಣ್ಣ ಕೈಗಾರಿಕೆಗಳ ಉಪ ಸಚಿವೆಯವರು).—

ಅ) ೧೮೪ ಘಟಕಗಳು

ಆ) ಇಲ್ಲ. ಆದರೆ ಆದೇಶ ಪಡೆದಿರುವ ಘಟಕಗಳ ಹಾಗೂ ಮೌಲ್ಯದ ವಿವರಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.